ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 536/2023 CW- 1PW- 1

| | |
|---|---|
| ಹೆಸರು | ಶರಣಪ್ಪ |
| ತಂದೆಯ ಹೆಸರು | ಶಿವಗಾ |
| ವಯಸ್ಸು | 63 ವರ್ಷ |
| ಉದ್ಯೋಗ | ನಿವೃತ್ತ ಅಬಕಾರಿ ಉಪ ನಿರೀಕ್ಷಕರು |
| ವಾಸ ಸ್ಥಳ | ರಾಯಚೂರು. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 27-01-2026

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ನಾನು 2022 ರಿಂದ ಜುಲೈ 2023 ರವರೆಗೆ ಸಿಂಧನೂರು ಅಬಕಾರಿ ಪೋಲೀಸ್ ಠಾಣೆಯಲ್ಲಿ ಅಬಕಾರಿ ಉಪ ನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 07-10-2022 ರಂದು ನಮ್ಮ ಮೇಲಾಧಿಕಾರಿಯವರ ಆದೇಶದಂತೆ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನಾನು, ಚಾ.ಸಾ. 4, 5 ಹಾಗೂ 8 ಸೇರಿಕೊಂಡು ನಮ್ಮ ಸರ್ಕಾರಿ ವಾಹನ ಸಂ. ಕೆ.ಎ. 36 ಜಿ 176 ನೇದ್ದರಲ್ಲಿ ಕುಳಿತುಕೊಂಡು ಹೋಗುತ್ತಿರುವಾಗ ಜವಳಗೇರಾ ಗ್ರಾಮದಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ ಬಂಗಾಲಿಕ್ಯಾಂಪ್ ಆರ್.ಹೆಚ್. ನಂ. 2 ರಲ್ಲಿ ಒಬ್ಬ ವ್ಯಕ್ತಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಾತ್ಮಿ ಬಂದ ಮೇರೆಗೆ ಜವಳಗೇರಾ ಚರ್ಚ್ ಹತ್ತಿರ ನಿಂತಿದ್ದ ಚಾ.ಸಾ. 2 ಮತ್ತು 3 ರನ್ನು ಬಾತ್ಮಿ ವಿಚಾರ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ನಾನು, ಚಾ.ಸಾ. 2 ರಿಂದ 5 ಹಾಗೂ 8 ಕೂಡಿ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ಅಲ್ಲಿಂದ ಬಂಗಾಲಿ ಕ್ಯಾಂಪ್ ಆರ್.ಹೆಚ್. ನಂ. 2 ಮಣಿಶಂಕರ್ ಸರ್ಕಾರ್ ತಂ. ಲಲಿತ್ ಮೋಹನ್ ಸರ್ಕಾರ್ ಇವರ ಮನೆಗೆ ಹೋಗಿ ನೋಡಲಾಗಿ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಆತ ಪರಾರಿಯಾದನು ನಮ್ಮ ಸಿಬ್ಬಂದಿಯವರು ಆತನಿಗೆ ಹಿಡಿಯಲು ಪ್ರಯತ್ನಿಸಿದರು ಸಿಗದೇ ಓಡಿ ಹೋಗಿರುತ್ತಾನೆ. ನಂತರ ಆತನ ಮನೆಯನ್ನು ಶೋಧಗೊಳಿಸಲು ನ್ಯಾಯಾಲಯದಿಂದ ವಾರೆಂಟ್ ಇಲ್ಲದ ಕಾರಣ ಪಂಚರ ಸಮಕ್ಷಮ ಅಲ್ಲಿಯೇ ಶೋಧನಾ ಸಮುಚ್ಚಿತ

ಆಧಾರ ಪತ್ರ ತಯಾರಿಸಿ ಆತನ ಮನೆಯನ್ನು ಪ್ರವೇಶಿಸಿ ನೋಡಲಾಗಿ ಅಲ್ಲಿ ಒಂದು ಬಿಳಿ ಬಣ್ಣದ ಗೊಬ್ಬರ ಚೀಲವಿತ್ತು ಅದರಲ್ಲಿ 90 ಎಂ.ಎಲ್. ಅಳತೆಯ ಓ.ಸಿ. ವಿಸ್ಕಿಯ 87 ಟೆಟ್ರಾಪಾಕೇಟ್‌ಗಳು, 180 ಎಂ.ಎಲ್. ಅಳತೆಯ ಬಿ.ಪಿ. ವಿಸ್ಕಿಯ 16 ಟೆಟ್ರಾಪಾಕೇಟ್‌ಗಳಿದ್ದವು. ಸದರಿ ವ್ಯಕ್ತಿ ಈ ಮುದ್ದೆಮಾಲನ್ನು ಮಾರಾಟ ಮಾಡುವ ಉದ್ದೇಶಕ್ಕಾಗಿ ಸಂಗ್ರಹಿಸಿಟ್ಟಿರುವ ವಿಚಾರ ಕಂಡುಬಂದಿದ್ದರಿಂದ ಸದರಿ ಮುದ್ದೆಮಾಲನ್ನು ಜಪ್ತುಪಡಿಸಿಕೊಂಡು ಅವುಗಳಿಂದ ನಿಯಮಾನುಸಾರ ಪಂಚರ ಸಮಕ್ಷಮ ಮಾದರಿ ತೆಗೆದು ಸಾಯಂಕಾಲ 6.45 ರಿಂದ 7.50 ರವರೆಗೆ ಪಂಚನಾಮೆ ಜರುಗಿಸಿರುತ್ತೇನೆ. ನಂತರ ಸಿಕ್ಕಮುದ್ದೆಮಾಲು,ಪಂಚನಾಮೆ ಸಮೇತ ಠಾಣೆಗೆ ಹಾಜರಾಗಿ ಸರ್ಕಾರದತರಪಿ ದೂರನ್ನು ದಾಖಲಿಸಿಕೊಂಡು ಪ್ರ.ವ.ವ. ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಮುಂದುವರೆದು ಸಾಕ್ಷಿ ಪಂಚನಾಮೆ ಕಾಲಕ್ಕೆ ಪಂಚರ ಮತ್ತು ತನ್ನ ಸಹಿಯುಳ್ಳ ಮಾದರಿ ಮುದ್ರೆ ನಮೂನೆ ತಯಾರಿಸಿರುತ್ತೇನೆ. ಮುಂದುವರೆದು ಪಂಚನಾಮೆಯಲ್ಲಿ ನಜರ್‌ಚುಕಿನಿಂದ ಆರೋಪಿತನ ಗುರುತಿನ ಚೀಟಿಯನ್ನು ಜಪ್ತುಪಡಿಸಿಕೊಂಡಿದ್ದಾಗಿ ನಮೂದಿಸಿದ್ದು ಇದೆ ಆದರೆ ಯಾವುದೇ ಚುನಾವಣಾ ಗುರುತಿನ ಚೀಟಿ ಜಪ್ತುಪಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯು ಶೋಧನಾ ಸಮುಚ್ಚಿತ ಆಧಾರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ಜಪ್ತುಪಂಚನಾಮೆಯನ್ನು ನಿ.ಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು. ಮಾದರಿ ಮುದ್ರೆ ನಮೂನೆಯನ್ನು ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು. ದೂರನ್ನು ನಿ.ಪಿ. 4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 4(ಎ) ಎಂದು ಗುರುತಿಸಲಾಯಿತು. ಪ್ರ.ವ.ವ.ಯನ್ನು ನಿ.ಪಿ. 5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 5(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಮುದ್ದೆಮಾಲು ಮತ್ತು ಅವುಗಳ ಮೇಲೆ ಪಂಚರ ಮತ್ತು ತನ್ನ ಸಹಿ ಮಾಡಿದ ಚೀಟಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಸದರಿ ಮುದ್ದೆಮಾಲನ್ನು ಒಟ್ಟಾರೆಯಾಗಿ ಮು.ಮಾ. 1 ಎಂದು ಗುರುತಿಸಲಾಯಿತು. ಮುಂದುವರೆದು ಸಾಕ್ಷಿ ಚಾ.ಸಾ. 4 ಮತ್ತು 5 ರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ನುಡಿಯುತ್ತಾರೆ.

<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ. ಎಸ್.ಎಸ್.ಜಿ. ವಕೀಲರಿಂದ</u>

ನಾನು ರಾಯಚೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾಲಕ್ಕೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಬಕಾರಿ ದಾಳಿ ಕೈಗೊಂಡಿದ್ದೆ. ಸದರಿ ದಾಳಿ ಕುರಿತು ಮಾಹಿತಿಯನ್ನು ಸಿಂಧನೂರಿನ ಅಬಕಾರಿ ಸಿಬ್ಬಂದಿಯವರಿಗೆ ತಿಳಿಸಿರಲಿಲ್ಲ. ಪ್ರಕರಣದಲ್ಲಿ ಮುದ್ದೆಮಾಲನ್ನು ಜಪ್ತುಪಡಿಸಿಕೊಂಡ ನಂತರ ನಮ್ಮ ಮೇಲಾಧಿಕಾರಿಯವರಿಗೆ ತಿಳಿಸಿರುತ್ತೇನೆ. ವಿಷಯ ತಿಳಿದ ನಂತರ ಸದರಿಯವರು ಗುನ್ನಾಸ್ಥಳಕ್ಕೆ ಬಂದಿರಲಿಲ್ಲ.

ಸಿಂಧನೂರಿನಿಂದ ಗುನ್ನಾಸ್ಥಳ 7 ರಿಂದ 8 ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ಅರಗಿನಮರಕ್ಯಾಂಪ್‌ನಿಂದ ಗುನ್ನಾಸ್ಥಳ ಎಷ್ಟು ದೂರದಲ್ಲಿದೆ ಎಂದು ನನಗೆ ನೆನಪಿಲ್ಲ. ಅರಗಿನಮರಕ್ಯಾಂಪ್‌ನಿಂದ ಆರ್.ಹೆಚ್.ಕ್ಯಾಂಪ್‌ಗೆ ಹೋಗಬೇಕಾದರೆ ಅಕ್ಕ ಪಕ್ಕ ಗುಡಿಸಲುಗಳು ಇವೆ ಎಂದರೆ ಸರಿ. ಗುನ್ನಾಸ್ಥಳ ಮನೆಯಿತ್ತು, ಅದು ಮಣಿಶಂಕರ್ ಈತನಿಗೆ ಸಂಬಂಧಿಸಿದ್ದಾಗಿತ್ತು. ಸದರಿ ಮನೆ ಮಾಲೀಕತ್ವದ ಕುರಿತು ವಿಚಾರಣೆ ಮಾಡಿದಾಗ ಅದು ಆರೋಪಿತನ ಮನೆ ಎಂದು ತಿಳಿದಿರುತ್ತದೆ. ಸದರಿ ಮಾಹಿತಿ ನೀಡಿದವರ ಹೇಳಿಕೆ ಪಡೆದುಕೊಂಡಿಲ್ಲ. ದಾಳಿ ಕಾಲಕ್ಕೆ ನನ್ನ ಜೊತೆ ಸಿಬ್ಬಂದಿಯವರು ಮತ್ತು ಪಂಚರು ಹಾಜರಿದ್ದರು. ಗುನ್ನಾಸ್ಥಳ ಮನೆ ಆರೋಪಿತನ ತಂದೆ ಹೆಸರಿನಲ್ಲಿ ಇದೆ. ಗುನ್ನಾಸ್ಥಳದ ಮನೆಯ ಸುತ್ತಮುತ್ತ ಸಾಕಷ್ಟು ಮನೆಗಳಿವೆ ಎಂದರೆ ಸರಿ. ಸದರಿ ಮನೆಯವರ ಹೇಳಿಕೆಗಳನ್ನು ದಾಖಲಿಸಿಕೊಂಡಿಲ್ಲ. ಮು. ಮಾ. 1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಪಂಚರಿಗೆ ಮುಂಚಿತ ನೋಟೀಸ್ ನೀಡಿಲ್ಲ. ಓ.ಸಿ. ವಿಸ್ಕಿಯ 8 ಟೆಟ್ರಾಪಾಕೇಟ್‌ಗಳು, ಬಿ.ಪಿ. ವಿಸ್ಕಿಯ 20 ಟೆಟ್ರಾಪಾಕೇಟ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಕೊಟ್ಟುಕಳುಹಿಸಿದ್ದೆ. ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಬರೆದಿರುತ್ತಾರೆ. ಅದನ್ನು ಗುನ್ನಾಸ್ಥಳದಲ್ಲಿ ಬರೆದಿರುತ್ತಾರೆ. ಠಾಣಾ ಅಂಕಿಸಂಖ್ಯೆ ಹೆಚ್ಚಿಸಲು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಬಳಿ ಇದ್ದ ಗೊಬ್ಬರದ ಚೀಲವನ್ನು ಜಪ್ತುಪಡಿಸಿಕೊಂಡಿದ್ದೇವು. ಈ ವಿಚಾರರ ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಮುದ್ದೆಮಾಲಿಗೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,

ಸಿಂಧನೂರು.